# ಇ-ಆಡಳಿತ: ಸಮಯದ ಉಳಿತಾಯ

## "ಸರ್ಕಾರದ ಕೆಲಸ ದೇವರ ಕೆಲಸ"

ಈ ಉಕ್ತಿಯಂತೆ ಸರ್ಕಾರದ ಕೆಲಸ ಮಾಡುವ ಪ್ರತಿಯೊಬ್ಬರೂ ಹೇಳುವ ಮಾತಾಗಿದೆ. ದೇವರ ಹೆಸರು ಹೇಳಿಕೊಂಡು ಕುರುಡು ಕಾಂಚಾಣವನ್ನು ಅದೆಷ್ಟೋ ಜನ ತಮ್ಮ ಮನೆಗೆ ಲಕ್ಷ್ಮಿ ದೇವಿಯ ರೂಪದಲ್ಲಿ ಕರೆದುಕೊಂಡು ಹೋಗುವವರು, ಇನ್ನು ಕೆಲವರು ನಿಜವಾದ ದೇವರು ನಾವು ಮಾಡುವ ಕರ್ತವ್ಯದಲ್ಲಿಯೇ ಅಡಗಿದೆ ಎಂದು ಹೇಳಿ ತಾವು ಮಾಡುವ ಕೆಲಸ ನಿಷ್ಠೆಯಿಂದ ಮಾಡುವವರು ಇದ್ದಾರೆ. ಹೀಗಿರುವಾಗ ಸಾರ್ವಜನಿಕರು ತಮ್ಮ ಕೆಲಸಗಳು ಮಾಡಿಕೊಳ್ಳಲು ಹೋದಾಗ ಯಾವುದೋ ಒಂದು ನೆಪ ಹೇಳಿ ಕೆಲಸವನ್ನು ಮುಂದೆ ಹಾಕುತ್ತಿದ್ದರು. ಹೀಗೆ ನಡೆಯುತ್ತಿರುವ ಸರ್ಕಾರದ ಕೆಲಸವನ್ನು ಸಾರ್ವಜನಿಕರ ಬಳಿ ಕೊಂಡ್ಯೊಯಲು ಇ-ಆಡಳಿತವನ್ನು ಜಾರಿಗೆ ತಂದಿತು. ಕಳೆದ ಶತಮಾನದ ತೊಂಭತ್ತರ ದಶಕದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಆವಿಷ್ಕಾರಗಳು ಅಗಣಿತ. ಸಂಪರ್ಕ ಉಪಗ್ರಹ ತಂತ್ರಜ್ಞಾನದ ಪರಿಣಾಮ ಮಾಹಿತಿಗಳ ಕ್ಷಿಪ್ರ ರವಾನೆ ಜಗತ್ತಿನ ಎಲ್ಲಾ ವ್ಯವಹಾರಗಳ ಮೇಲೆ ಪರಿಣಾಮ ಬೀರಿದೆ. ನಿಸ್ತಂತು ಸಂಪರ್ಕ ಮಾಧ್ಯಮವನ್ನು ಎಷ್ಟರಮಟ್ಟಿಗೆ ವ್ಯಾಪಿಸಿದೆ ಎಂದರೆ ಕಛೇರಿ ವ್ಯವಹಾರಗಳು ಕಾಗದರಹಿತ ಸ್ವರೂಪವನ್ನು ಪಡೆಯುವ ಸಾಧ್ಯತೆ ಸೃಷ್ಟಿಯಾಗಿದೆ.

ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಕರ್ನಾಟಕದಲ್ಲಿ ಆಡಳಿತ ವ್ಯವಸ್ಥೆಯ ಆಧಾರ ಸ್ಥಂಭಗಳಾಗಿವೆ. ಆಡಳಿತದ ಒಟ್ಟಾರೆ ನಿರ್ವಹಣೆ ಕಾರ್ಯಾಂಗದ ಹೊಣೆಗಾರಿಕೆಯಾಗಿದ್ದು, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ತಮ್ಮ



downloaded from: www.kpscvaani.com

ಹೊಣೆಗಾರಿಕೆಯನ್ನು ಕಾಲಕಾಲಕ್ಕೆ ನಿರ್ವಹಿಸುತ್ತ ವ್ಯವಸ್ಥೆಯನ್ನು ಶಿಸ್ತಿನಿಂದ ಕಾರ್ಯ ನಡೆಸುವ ಪ್ರವೃತ್ತಿ ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕದಲ್ಲಿ ನಡೆದುಬಂದಿದೆ. ಸರ್ಕಾರದ ಸಿಬ್ಬಂದಿಯಾಗಿ ನೇಮಕವಾಗುವವರು ಅರ್ಹತೆ ಮತ್ತು ಪ್ರಾಮಾಣಿಕತೆಯಲ್ಲಿ ದಕ್ಷರಾಗಿರಬೇಕು ಎಂದು ಮೈಸೂರು ಸಂಸ್ಥಾನದ ಹೆಮ್ಮೆಯ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರು ಪ್ರತಿಪಾದಿಸುತ್ತ ಬಂದಿದ್ದರು. ಸರ್ಕಾರದ ಸೇವೆಯಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡುವ ವಿಷಯದಲ್ಲಿ ರಾಜಿಯಾಗುವುದಕ್ಕೆ ಸಾಧ್ಯವಿಲ್ಲವೆಂದು ದಿವಾನ ಹುದ್ದೆಯನ್ನು ತ್ಯಜಿಸಲು ಅವರು ಮುಂದಾಗಿದ್ದ ಐತಿಹಾಸಿಕ ಘಟನೆ ಆಡಳಿತ ವ್ಯವಸ್ಥೆಯನ್ನು ಗುಣಾತ್ಮಕವಾಗಿ ಇಟ್ಟುಕೊಳ್ಳಬೇಕು ಎಂದು ಹಿಂದಿನ ತಲೆಮಾರಿನ ಆಡಳಿತಗಾರರ ಕರ್ತವ್ಯಬದ್ಧತೆಗೆ ನಿದರ್ಶನವಾಗಿದೆ. ಇವರ ನಂತರ ವಿವಿಧ ರಾಜಕೀಯ ಪಕ್ಷಗಳು ರಾಜ್ಯದ ಅಧಿಕಾರ ಚುಕ್ಕಾಣಿಯನ್ನು ಹಿಡಿದಿವೆ. ಯಾವುದೇ ಪಕ್ಷ ಅಧಿಕಾರ ನಡೆಸಿದರೂ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಆಡಳಿತ ನಡೆಯುವಂತೆ ಕಾರ್ಯಾಂಗ ಎಚ್ಚರ ವಹಿಸಿದೆ.

ಸರ್ಕಾರದ ಪ್ರತಿಯೊಂದು ನಿರ್ಧಾರಗಳು, ಯೋಜನೆಗಳು ಜನತೆಗೆ ಕ್ಷಿಪ್ರವಾಗಿ ತಲುಪಬೇಕು ಮತ್ತು ಅದು ಪಾರದರ್ಶಕವಾಗಿರಬೇಕು ಎಂಬು ಇ-ಆಡಳಿತದ ಉದ್ದೇಶ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆಡಳಿತ ಸುಧಾರಣಾ ವಿಭಾಗದಲ್ಲಿ ಕಾರ್ಯದಶಿ ಹುದ್ದೆಯನ್ನು ರೂಪಿಸುವ ಮೂಲಕ ಇ-ಆಡಳಿತ ಸಚಿವಾಲಯವನ್ನು ಸ್ಥಾಪಿಸಿದೆ. ಇ-ಆಡಳಿತದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚಿನ ಇಲಾಖೆಗಳನ್ನು ಸೇರಿಸಿ ಸಾರ್ವಜನಿಕರ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸುವುದು ಮತ್ತು ಜನ ಸಾಮಾನ್ಯರಿಗೆ ಕ್ಲಿಷ್ಟಕರವಾಗಿರದೆ ಸುಲಭವಾಗಿ ಕೈಗೆಟುವುದು ಇ-ಆಡಳಿತದ ಇನ್ನೊಂದು ಉದ್ದೇಶ.


downloaded from: www.kpscvaani.com

ಕಂದಾಯ ಭೂಮಿ, ಖಜಾನೆ, ಇ-ಸಂಗ್ರಹಣೆ, ಮಾನವ ಸಂಪನ್ಮೂಲದ ವ್ಯವಸ್ಥಿತ ಬಳಕೆ, ನ್ಯಾಯಾಂಗ, ಕೃಷಿ, ಸಾರಿಗೆ, ನಗರಾಭಿವೃದ್ಧಿ, ಆಹಾರ ಮತ್ತು ನಾಗರಿಕ ಸರಬರಾಜು ಇತ್ಯಾದಿ ಇಲಾಖೆಗಳಿಗೆ ಸಂಬಂಧಿಸಿ ತ್ವರಿತ ಸೇವೆಗೆ ಬೃಹತ್ ಸಂಪರ್ಕ ಜಾಲವಾಗಿದೆ. ಧ್ವನಿ ಮತ್ತು ದೃಶ್ಯ ಸಂವಹನದ ತಾಂತ್ರಿಕತೆ (ವಿಡಿಯೋ ಕಾನ್ಫರೆನ್ಸ್) ಒಳಗೊಂಡಿರುವ ಕಾರಣ ರಾಜ್ಯದ ಯಾವುದೇ ಭಾಗದ ಮಾಹಿತಿಯನ್ನು ಕ್ಷಣದಲ್ಲಿಯೇ ಪಡೆದುಕೊಳ್ಳಬಹುದಾಗಿದೆ.

**ಮಾನವ ಸಂಪನ್ಮೂಲ ವ್ಯವಸ್ಥೆ ಪದ್ಧತಿ:-** ಇ-ಆಡಳಿತ ಬರುವ ಮುಂಚೆ ಎಲ್ಲಾ ಕ್ಷೇತ್ರಗಳಲ್ಲಿ ವೇತನ ಬಟವಾಡೆ ಮತ್ತು ನೌಕರರ ಪಿಂಚಣಿಯನ್ನು ಪಡೆದುಕೊಳ್ಳು ಹರಸಾಹಸ ಮಾಡಬೇಕಾಗುತ್ತಿತ್ತು. ಇ-ಆಡಳಿತ ವ್ಯವಸ್ಥೆ ಬಂದ ಮೇಲೆ ಎಲ್ಲಾ ಸರ್ಕಾರಿ ನೌಕರರಿಗೆ ವಿದ್ಯುನ್ಮಾನ ಜಾಲದ ಮುಖಾಂತರ ವೇತನ ಬಟವಾಡೆ ಮಾಡುತ್ತಿದ್ದಾರೆ. ಅಲ್ಲದೆ ಎಲ್ಲಾ ಸರ್ಕಾರಿ ನೌಕರರ ಸೇವಾ ಪುಸ್ತಕಗಳಲ್ಲಿನ ಮಾಹಿತಿ ವಿವರಗಳನ್ನು ಗಣಕೀಕರಣ ಮಾಡಲಾಗಿದೆ. ಇದರಿಂದಾಗಿ ಮುಂಬರುವ ದಿನಗಳಲ್ಲಿ ಸರ್ಕಾರಿ ನೌಕರರ ಪಿಂಚಣಿಯು ಅವರ ನಿವೃತ್ತಿಯಾದ ದಿನವೇ ವಿತರಣೆಯಾಗದು.

UJWALA ACADEMY






downloaded from: www.kpscvaani.com

**ಆಧಾರ್ ಯೋಜನೆ:-** ದೇಶದ ಬಹು ಮಹತ್ವಾಕಾಂಕ್ಷೆಯ ಯೋಜನೆಯಾದ ಆಧಾರ್ ಯೋಜನೆಯನ್ನು 2010 ರಿಂದ ಆರಂಭಿಸಲಾಗಿದೆ. ರಾಜ್ಯದ ಎಲ್ಲಾ ನಿವಾಸಿಗಳಿಗೆ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡುವ ಸರ್ಕಾರದ ಯೋಜನೆ. ಈ ಯೋಜನೆ ಪ್ರತಿನಿತ್ಯ ಜನಿಸುವ ಪ್ರತಿ ಮಗುವಿಗೂ ಅನ್ವಯಿಸುವುದರಿಂದ ನಿರಂತರವಾಗಿ ನಡೆಯುವ ಕಾರ್ಯವಾಗಿದೆ. ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯುವುದಕ್ಕೆ ಆಧಾರ್ ಗುರುತಿನ ಚೀಟಿ ಹೊಂದುವುದು ಕಡ್ಡಾಯಗೊಳಿಸಲಾಗಿದೆ. ಈ ಯೋಜನೆಯಿಂದಾಗಿ ನಾಗರಿಕ ಸೇವೆಗಳು ಯಾರಿಗೆ ತಲುಪಬೇಕಾಗಿದೆಯೋ, ಅವರಿಗೆ ನೇರವಾಗಿ ತಲುಪಿಸುವ ಕೆಲಸ ಅತ್ಯಂತ ಪರಿಣಾಮಕಾರಿ ಮತ್ತು ವ್ಯವಸ್ಥಿತವಾಗಿ ಜರುಗುತ್ತಿದೆ. ಉದಾ:- ಬ್ಯಾಂಕ್ ಖಾತೆಗೆ ಆಧಾರ್ ನೊಂದಣಿ ಮಾಡಿಸುವುದು ಕಡ್ಡಾಯವಾಗಿದೆ.

**ಇ-ಫಾರ್ಮ್:-** ವಿದ್ಯುನ್ಮಾನ ನಮೂನೆಗಳ ಯೋಜನೆಯಡಿಯಲ್ಲಿ ವಿವಿಧ ಸರ್ಕಾರಿ ಇಲಾಖೆಗಳು ಸಾರ್ವಜನಿಕರಿಗೆ ನೀಡುವ ಸೌಲಭ್ಯ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಇ-ಫಾರ್ಮ್ ಮೂಲಕ ನಮೂನೆಗಳನ್ನು ಸಲ್ಲಿಸಲು ಅನುವು ಮಾಡಿಕೊಡಲಾಗಿದೆ. ಈ ಯೋಜನೆಯಿಂದ ಸಾರ್ವಜನಿಕರು ಯಾವ ಸಮಯದಲ್ಲಾದರೂ ಎಲ್ಲಿಂದಾದರೂ ಸರ್ಕಾರಿ ಸೇವೆಗಳನ್ನು ಪಡೆಯಬಹುದಾಗಿದೆ.

ವಿವಿಧ ಇಲಾಖೆಗಳ ಇ-ಆಡಳಿತ ಯೋಜನೆಗಳ ಸಮರ್ಪಕ ರಚನೆ, ಅನುಮೋದನೆ ಮತ್ತು ಅನುಷ್ಠಾನಗಳ ಬಗ್ಗೆ ಕಾರ್ಯ ವಿಧಾನವನ್ನು ನಿಗದಿಪಡಿಸಲಾಗಿದೆ. ಈ ಕಾರ್ಯ ವಿಧಾನದನ್ವಯ ಪ್ರತಿ ಇಲಾಖೆಯು ಆಯಾ ವರ್ಷದಲ್ಲಿ ಕೈಗೊಳ್ಳುವ ಘನಕೀಕರಣ ಯೋಜನೆಗಳನ್ನು ಒಳಗೊಂಡ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಬೇಕಾಗಿರುತ್ತದೆ.



downloaded from: www.kpscvaani.com

ಮಾಹಿತಿ ತಂತ್ರಜ್ಞಾನದ ಮೂಲಭೂತ ಸೌಲಭ್ಯಗಳನ್ನು ಸೃಜಿಸುವುದರಲ್ಲಿ ಆಗಬಹುದಾದ ನಕಲನ್ನು ತಡೆಗಟ್ಟಲು ಮತ್ತು ರಾಜ್ಯ ಮಾಹಿತಿ ಕೇಂದ್ರದಂತಹ ಈಗಾಗಲೇ ಸ್ಥಾಪಿಸಲ್ಪಟ್ಟ ಮಾಹಿತಿ ತಂತ್ರಜ್ಞಾನ ಸೌಲಭ್ಯಗಳಿಂದ ಹೆಚ್ಚಿನ ಉಪಯುಕ್ತತೆಗೆ ಅನುಕೂಲವಾಗುತ್ತದೆ. ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಕಲ್ಪಿಸಿದ ವ್ಯವಸ್ಥೆ ತುಂಬಾ ಅನುಕೂಲವಾಗಿದೆ. ವಿವಿಧ ಸೇವೆಗಳ ಶುಲ್ಕಗಳನ್ನು ಯಾವುದೇ ಹೊತ್ತಿನಲ್ಲಿ ಪಾವತಿಸುವಂತಹ ವ್ಯವಸ್ಥೆ ತುಂಬಾ ಜನಪರವಾದ ಉಪಕ್ರಮವಾಗಿದೆ. ರೈತರ ಜಮೀನಿಗೆ ಸಂಬಂಧಿಸಿದ ಪಹಣಿ ಪಡೆಯಲು, ನಿವೇಶನ ನೊಂದಣಿ ಪ್ರಕ್ರಿಯೆಗಳನ್ನು ಸುಗಮಗೊಳಿಸುವುದು ಇ-ಆಡಳಿತದ ಹೆಗ್ಗಳಿಕೆ.

ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಆಗಿರುವ ಆವಿಷ್ಕಾರಗಳನ್ನು ಆಡಳಿತದ ವಿವಿಧ ಹಂತಗಳಲ್ಲಿ ಅಳವಡಿಸಿಕೊಂಡಿರುವ ಕರ್ನಾಟಕದ ಆಡಳಿತ ವ್ಯವಸ್ಥೆಯಿಂದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕೆಲಸವು ಹಗುರವಾಗಿದೆ. ಪ್ರವಾಸ ಮಾಡದೆಯೇ ರಾಜ್ಯದ ಯಾವುದೇ ಮೂಲೆಯ ಪ್ರದೇಶ ಸಾಕ್ಷಾತ್ ಪರಿಸ್ಥಿತಿಯನ್ನು ಗಮನಿಸಬಹುದಾಗಿದೆ ಮತ್ತು ಅಲ್ಲಿನ ವ್ಯಕ್ತಿಗಳೊಂದಿಗೆ ನೇರವಾಗಿ ಸಂವಾದ ಮಾಡಬಹುದಾಗಿದೆ. ಗ್ರಾಮಪಂಚಾಯತ್ ವ್ಯಾಪ್ತಿಯ ವಿವಿಧ ಯೋಜನೆಗಳ ಫಲಾನುಭವಿಗಳ ಮಾಹಿತಿಯನ್ನು ದಾಖಲಿಸಿಕೊಳ್ಳಬಹುದಾಗಿದೆ. ಪ್ರತಿ ಫಲಾನುಭವಿಯ ಮಾಹಿತಿ ಗಣಕ ಯಂತ್ರದ ಜಾಲದಲ್ಲಿದ್ದರೆ, ಒಬ್ಬರ ಹೆಸರಿನಲ್ಲಿ ಇನ್ನೊಬ್ಬರು ಸರ್ಕಾರಿ ಸೌಲಭ್ಯಗಳನ್ನು ಪಡೆಯುವುದನ್ನು ತಪ್ಪಿಸಬಹುದಾಗಿದೆ. ಪಡಿತರ ಚೀಟಿ, ಮತದಾರರ ಚೀಟಿ, ಇತ್ಯಾದಿ ಗುರುತು ಪತ್ರಗಳನ್ನು ವಿತರಿಸುವುದು ಸುಲಭವಾಗಿದೆ.

ಒಟ್ಟಾರೆಯಾಗಿ ಕರ್ನಾಟಕದಲ್ಲಿ ಇ-ಆಡಳಿತ ವ್ಯವಸ್ಥೆ ಜಾರಿಗೆ ಬಂದಿದ್ದರಿಂದ ಭ್ರಷ್ಟಾಚಾರ ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಿದೆ. ಜನ ಸ್ನೇಹಿಯಾದ ಆಡಳಿತ ಅನುಷ್ಠಾನದಲ್ಲಿದ್ದರೂ ಅಕ್ರಮ ವ್ಯವಹಾರಗಳು, ಕಾನೂನು ಉಲ್ಲಂಘನೆಗಳು, ಸ್ವಜನ


downloaded from: www.kpscvaani.com

ಪಕ್ಷಪಾತ, ಅಧಿಕಾರ ದುರುಪಯೋಗದಂತಹ ಪ್ರಕರಣಗಳು ಇನ್ನೂ ಕೆಲ ಹಂತಗಳಲ್ಲಿ ಕಂಡುಬರುತ್ತಿದೆ. ಆಡಳಿತ ಯಂತ್ರವನ್ನು ಆಧುನಿಕರಣಗೊಳಿಸಿದರಷ್ಟೇ ಸಾಲದು, ಅದನ್ನು ನಿರ್ವಹಿಸುವವರು ಕೂಡ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ನಿಖರತೆಗೆ ಅನುಗುಣವಾದ ಕಾನೂನಿನ ಗೌರವ, ನಿಯಮಗಳ ಪಾಲನೆ ಮತ್ತು ಪ್ರಾಮಾಣಿಕತೆಯಂಥ ನಡವಳಿಕೆಗಳನ್ನು ವೃತ್ತಿ ಬದುಕಿನಲ್ಲಿ ಅನುಸರಿಸಿದರೆ 'ಇ-ಆಡಳಿತ' ನಿಜಕ್ಕೂ ಜನ ಸ್ನೇಹಿಯಾಗುತ್ತದೆ.

**"ಜೈ ಹಿಂದ್"**

<u>ಬರಹಗಾರರು</u>

ಅವಿನಾಶ್

ಬೆಂಗಳೂರು






downloaded from: www.kpscvaani.com